**ಓ ಎಸ್ ನಂಃ 325-14**
**ಪಿ ಡಬ್ಲ್ಯೂ ಃ 1**

**ದಿಃ 12-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎಲ್ ವಕೀಲರಿಂದ**

**46.** ನಾನು ನನ್ನ ಅತ್ತೆ ಈರಮ್ಮ ವಿಲ್ ಮಾಡಿಕೊಟ್ಟಿರುವ ಆಧಾರದಲ್ಲಿ ಈ ದಾವೆ ಸಲ್ಲಿಸಿದ್ದೇನೆ. ನನ್ನ ಅತ್ತೆಯ ತಂದೆ ನಾಗಣ್ಣ ಹಾಗೂ ತಾತ ಕೆಂಚಯ್ಯ ಪಡಾ ರಿಸ್ಟೋರ್ ಮಾಡಲು ಅರ್ಜಿ ಸಲ್ಲಿಸಿ ಪಡಾ ರಿಸ್ಟೋರ್ ಮಾಡಿಸಿಕೊಂಡು ಸ್ವತ್ತು ಪಡೆದಿರುತ್ತಾರೆ. ನಾನು ನಿಪಿ 86 ನ್ನು ಹಾಜರುಪಡಿಸಿ ಬೇರೆ ದಾವೆ ಸಲ್ಲಿಸಿ ಅದರಲ್ಲಿ ಅದರ ಆಧಾರದಲ್ಲಿ ಮಾಡಿದ್ದರು ಎಂದು ಆದೇಶ ಪಡೆದುಕೊಂಡಿಲ್ಲ. ನನ್ನ ಅತ್ತೆ ಮೃತಪಟ್ಟ ನಂತರ ಚಂದ್ರಾಚಾರಿ ರವರು ಆ ವಿಲ್ ಮಾರುವ ಬಗ್ಗೆ ತಿಳಿಸಿದ್ದರಿಂದ ನನ್ನ ಅತ್ತೆ ಕಾರ್ಯ ಮುಗಿಸಿ ಹುಡುಕಿದಾಗ ನನಗೆ ಸಿಕ್ಕಿತು. ನನ್ನ ಅತ್ತೆ ಚಂದ್ರಾಚಾರಿ ಮನೆಗೆ ಹೋಗುತ್ತಿದ್ದುದರಿಂದ ಚಂದ್ರಾಚಾರಿ ನನ್ನ ಅತ್ತೆಗೆ ಪರಿಚಿತರು. ಚಂದ್ರಾಚಾರಿರವರು ಸದರಿ ವಿಲ್ ನಲ್ಲಿ ಸಾಕ್ಷಿಯಾಗಿ ಸಹಿ ಮಾಡಿಲ್ಲ. ಆದರೆ ಅಲ್ಲಿಗೆ ಹೋಗಿದ್ದರಂತೆ. ಸದರಿ ವಿಲ್ ಗೆ ವೇಣುಗೋಪಾಲ್ ಮತ್ತು ಸುಬ್ಬರಾವ್ ಎಂಬುವವರು ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ.

**47.** ವಿಲ್ ನ್ನು ಬರೆಯುವ ಸಂದರ್ಭದಲ್ಲಿ ಈರಮ್ಮ ಬೆಂಗಳೂರಿನಲ್ಲೆ ವಾಸವಿದ್ದರು. ಆ ರೀತಿ ಅವರು ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವ ಬಗ್ಗೆ ಗುರುತಿನ ಚೀಟಿಯಂತಹ ದಾಖಲೆಗಳು ಇಲ್ಲ. ಸಾಕ್ಷಿಗಳು ಯಶವಂತಪುರದಲ್ಲಿ ಹಿಂದೆ ಇದ್ದು ಈಗ ಖಾಲಿ ಮಾಡಿ ಹೋಗಿರುವುದರಿಂದ ಅವರು ಎಲ್ಲಿ ಇದ್ದಾರೆಂದು ಗೊತ್ತಿಲ್ಲ. ಸಾಕ್ಷಿಗಳಾದ ವೇಣುಗೋಪಾಲ್ ಮತ್ತು ಸುಬ್ಬರಾವ್ ನನ್ನ ಸಂಬಂಧಿಕರು ಅಲ್ಲ. ನನ್ನ ಅತ್ತೆಗೆ ಅವರಿಬ್ಬರು ಸುಮಾರು 20 ವರ್ಷಗಳಿಂದ ಪರಿಚಿತರು. ವಿಲ್ ಮಾಡಲು ಈರಮ್ಮರವರಿಗೆ ಯಾವುದೇ ರೀತಿಯ ಹಕ್ಕು ಆ ಆಸ್ತಿ ಮೇಲೆ ಇರಲಿಲ್ಲ ಅಂದರೆ ಸರಿಯಲ್ಲ.

**48.** ವಿಲ್ ನ ಆಧಾರದ ಮೇಲೆ ನನ್ನನ್ನು ಮಾಲೀಕರೆಂದು ಘೋಷಿಸಲು ಈ ದಾವೆ ಸಲಿಲಸಿರುತ್ತೇನೆ. ನಾಗಣ್ಣರವರು ಮೃತಪಡುವ ಮುಂಚೆ ಅವರ ಆಸ್ತಿಗಳು ಈರಮ್ಮರಿಗೆ ಒಬ್ಬರಿಗೆ ಹೋಗಲಿ ಎಂದು ಯಾವುದೇ ದಾಖಲೆ ಮಾಡಿರುವುದಿಲ್ಲ. ಈರಮ್ಮನ ಸಹೋದರಿಯರು ಈರಮ್ಮನವರಿಗೆ ಯಾವುದೇ ಹಕ್ಕು ಬಿಡುಗಡೆ ಪತ್ರ ಅಥವಾ ಇತರ ಪತ್ರಗಳನ್ನು ಮಾಡಿಕೊಟ್ಟಿರುವುದಿಲ್ಲ. ನಾನು ನಾಗಣ್ಣನವರ ಉಳಿಕೆ ಮಕ್ಕಳು ದಾವಾ ಸ್ವತ್ತಿನಲ್ಲಿ ನನ್ನ ಹಕ್ಕಿನ ಬಗ್ಗೆ ಯಾವುದೇ ವಿರೋಧ ಇಲ್ಲ ಎಂದು ನನ್ನ ದಾವೆಯಲ್ಲಿ ಹೇಳಿದ್ದೇನೆ ಅಂದರೆ ಸಾಕ್ಷಿ ಆ ರೀತಿ ಹೇಳಿಲ್ಲ ಎಂದು ನುಡಿಯುತ್ತಾರೆ.

**49.** ನಾಗಣ್ಣ ಮೃತಪಟ್ಟ ನಂತರ ಅವರ ಹೆಂಡತಿ ಮಕ್ಕಳು ಅವರ ವಾರಸುದಾರರು ಅಂದರೆ ಸಾಕ್ಷಿ ಈರಮ್ಮನವರ ಸಹೋದರಿಯರು ಬೇರೆ ಕಡೆ ಹೋಗಿದ್ದರು ಹಾಗೂ ಈರಮ್ಮನವರೇ ಪಡಾ ರಿಸ್ಟೋರ್ ಮಾಡಿರುವುದು ಎಂದು ನುಡಿಯುತ್ತಾರೆ. ನಾಗಣ್ಣನವರಿಗೆ ಬೇರೆ ಮಕ್ಕಳು ಇದ್ದುದರಿಂದ ಈರಮ್ಮನವರಿಗೆ

ಒಬ್ಬರಿಗೆ ದಾವಾ ಸ್ವತ್ತಿನ ಬಗ್ಗೆ ವಿಲ್ ಮಾಡಲು ಹಕ್ಕು ಇರಲಿಲ್ಲ ಅಂದರೆ ಸರಿಯಲ್ಲ. ಈರಮ್ಮನವರ ಇಬ್ಬರ ಇತರ ಸಹೋದರಿಯರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸಾಕ್ಷಿ ಅವರು ಆಗಲೇ ಮೃತಪಟ್ಟಿರುವುದರಿಂದ ಹಾಗೂ ಅವರಿಗೆ ಬೇರೆ ವಾರಸುದಾರರು ಇಲ್ಲ ಎಂದು ನುಡಿಯುತ್ತಾರೆ.

**50.** **1988** ರಲ್ಲಿ ಪಡಾ ರಿಸ್ಟೋರೇಷನ್ ಗೆ ಈರಮ್ಮನವರೇ ಅರ್ಜಿ ಹಾಕಿರುತ್ತಾರೆ. ಈರಮ್ಮನವರು ಕಂದಾಯ ಅಧಿಕಾರಿಗಳ ಜೊತೆ ಎಷ್ಟು ಸಾರಿ ಅರ್ಜಿ ಹಾಕಿದ ನಂತರ ಹೇಳಿಕೆ ಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಪಡಾ ರಿಸ್ಟೋರೇಷನ್ ಪ್ರಕರಣದಲ್ಲಿ ಇದ್ದ ಎಲ್ಲಾ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ದಿಃ**03.12.1991** ರಂದು ಈರಮ್ಮನವರು ಕಂದಾಯ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿದ್ದಾರೆ ಆ ಹೇಳಿಕೆಯ ನಕಲನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿ ಇರಬಹುದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆ ಹೇಳಿಕೆಯಲ್ಲಿ ಈರಮ್ಮನವರು ಲಕ್ಷ್ಮಣಗೌಡನ ಮಗ ಕೃಷ್ಣಮೂರ್ತಿ, ಚಿಕ್ಕಣ್ಣರ ಮಗ ನರಸಿಂಹೇಗೌಡ, ರಾಮೇಗೌಡರ ಹೆಂಡತಿ ಹನುಮಕ್ಕ ಹಾಗೂ ಈರಮ್ಮ ಆದ ನಾವುಗಳು ಪಡಾ ರಿಸ್ಟೋರ್ ಆದ ನಂತರ ಕುಟುಂಬದಲ್ಲಿ ವಿಭಾಗ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆಂದರೆ ಸರಿಯಲ್ಲ.

**51.** ನಿಪಿ **27** ಮತ್ತು **28** ನ್ನು ನನ್ನ ಅತ್ತೆ ಈರಮ್ಮ ಅದನ್ನು ಬರೆಸಿಕೊಂಡು ಬಂದಿರುತ್ತಾರೆ. ನನ್ನ ಗಂಡ ಕೂಡಾ ಹೋಗಿರಬಹುದು ಎಂದು ನುಡಿಯುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ಆದರೆ ಸಹಿ ಮಾಡುತ್ತೇನೆ. **1939-1940** ರ ಹಿಂದೇನೇ ನರಸಿಂಹೇಗೌಡರ ಹೆಸರಿನಲ್ಲಿ ಖಾತೆ ಆಗಿ ಅವರೇ ಮಾಲೀಕರಾಗಿದ್ದರು ಅಂದರೆ ಸರಿಯಲ್ಲ. ಅವರ ಹೆಸರಿಗೆ ಖಾತೆ ಆಗುವ ಮುರೆ **20** ವರ್ಷಗಳಿಂದ ಅವರೇ ಅನುಭವದಲ್ಲಿದ್ದರು ಅಂದರೆ ಸಾಕ್ಷಿ ಈರಮ್ಮ ಅವರ ಸೊಸೆ ಆಗಿದ್ದರಿಂದ ಅವರು ಇದ್ದಿರಬಹುದು ಎಂದು ನುಡಿಯುತ್ತಾರೆ.

**52.** **1991** ಕ್ಕಿಂತ ಹಿಂದೆ ಕೊಟ್ಟ ಹೇಳಿಕೆಗೂ **1991** ರ ನಂತರ ಕೊಟ್ಟ ಹೇಳಿಕೆಗೂ ವ್ಯತ್ಯಾಸ ಇದ್ದು ಆ ನಂತರ ನಾಗಣ್ಣನೇ ಮಾಲೀಕರು ಎಂದು ಸುಳ್ಳು ಹೇಳಿಕೆ ಕೊಟ್ಟು ಪಡಾ ರಿಸ್ಟೋರ್ ಮಾಡಿಸಿಕೊಂಡಿರುವುದು ಅಂದರೆ ಸರಿಯಲ್ಲ. ಈರಮ್ಮ ನರಸಿಂಹೇಗೌಡರ ಕುಟುಂಬದ ಸದಸ್ಯರಾಗಿ ಪಡಾ ರಿಸ್ಟೋರ್ ಗೆ ಅರ್ಜಿ ಸಲ್ಲಿಸಿರುವುದು ಅಂದರೆ ಸರಿಯಲ್ಲ. ನನ್ನ ಗಂಡನ ಚುಕಾವಣೆಯಿಂದ ನಾಗಣ್ಣನ ಹೆಸರನ್ನು ಮುಂದೆ ತಂದು ಸಂಪೂರ್ಣ ಆಸ್ತಿಯನ್ನು ಕಬಳಿಸಬೇಕು ಎಂದು ಪಡಾ ರಿಸ್ಟೋರ್ ಮಾಡಿಸಿಕೊಂಡೆವು ಅಂದರೆ ಸರಿಯಲ್ಲ. ಈರಮ್ಮನವರಿಗೆ ಉಗ್ರಪ್ಪ, ಭಾಗ್ಯಮ್ಮ ಹಾಗೂ ನಾಗಮ್ಮರವರ ವಿರುದ್ದ ದ್ವೇಷ ಇರಲಿಲ್ಲ. ಸಂಪೂರ್ಣ ಆಸ್ತಿಯನ್ನು ನರಸಿಂಹೇಗೌಡರ ಕುಟುಂಬದಿಂದ ಕಬಳಿಸಲು ವಿಲ್ ನ್ನು ನನ್ನ ಹೆಸರಿಗೆ ಸೃಷ್ಟಿಸಿದ್ದೀನಿ ಅಂದರೆ ಸರಿಯಲ್ಲ.

**53.** ಈರಮ್ಮ ಸೋಲೂರಿನಲ್ಲಿ ಮೃತಪಟ್ಟಿರುವುದು ಅಂದರೆ ಸರಿ. ಅವರ ಅಂತ್ಯಕ್ರಿಯೆ ಅಲ್ಲೇ ನಡೆದಿರುವುದು ಅಂದರೆ ಸರಿ. ಉಗ್ರಪ್ಪರವರ ಜೊತೆ ಸೋಲೂರಿನಲ್ಲಿ ಅಮರ ವಾಸವಿದ್ದದ್ದು ಅಂದರೆ ಸಾಕ್ಷಿ ಅಲ್ಲಿ ಇಲ್ಲಿ ಎರಡು ಕಡೆ ಇರುತ್ತಿದ್ದರು ಎಂದು ನುಡಿಯುತ್ತಾರೆ. ವಿಲ್ ನ್ನು ಸಾಬೀತುಪಡಿಸಬೇಕು

ಎಂಬ ಉದ್ದೇಶದಿಂದ ನಮ್ಮ ಮನೆಯಲ್ಲಿ ಕೂಡಾ ಈರಮ್ಮ ವಾಸವಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

54. ಪಡಾ ರಿಸ್ಟೋರ್ ಆದ 15 ದಿವಸದಲ್ಲಿ 1ನೇ ಪ್ರತಿವಾದಿ ಎಸಿ ಮುಂದೆ ಅದರ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಅಂದರೆ ಸಾಕ್ಷಿ ವಿಲ್ ಆದ ನಂತರ 2 ಎಕರೆ ಶಿವಕುಮಾರ್ ರವರಿಗೆ ಮಾರಾಟ ಮಾಡಿದ ನಂತರ ಮೇಲ್ಮನವಿ ಸಲ್ಲಿಸಿದರು ಎಂದು ನುಡಿಯುತ್ತಾರೆ. ಆ ಮೇಲ್ಮನವಿಯ ನಂಬರ್ 16/1994-1995 ಅಂದರೆ ನನಗೆ ಗೊತ್ತಿಲ್ಲ. ಆ ಮೇಲ್ಮನವಿಯಲ್ಲಿ ಈರಮ್ಮನವರ ಹೆಸರಿಗೆ ಇದ್ದ ಖಾತೆ ವಜಾ ಆಗಿ ನರಸಿಂಹೇಗೌಡರ ಕುಟುಂಬಕ್ಕೆ ಸೇರಿದ್ದು ಎಂದು ಆದೇಶ ಆಗಿದೆ ಅಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತಹ ರಿಟ್ ಅನ್ನು ಅದರ ಮೇಲೆ ಸಲ್ಲಿಸಿದ್ದೇನೆ ಅಂದರೆ ಸರಿ.

55. ಆ ರಿಟ್ ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಮಾಡಿದ ಆದೇಶವನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಆ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿಲ್ಲ. ಈರಮ್ಮನವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ. ಅವರಿಗೆ ಊರಿನಲ್ಲಿ ಯಾರನ್ನಾದರೂ ಕರೆದುಕೊಂಡು ಸಹಾಯ ಪಡೆಯುತ್ತಿದ್ದರು. ನರಸಿಂಹೇಗೌಡರ ಕುಟುಂಬದವರು ಅಲ್ಲಿ ಯಾರೂ ವಾಸವಿಲ್ಲದೇ ಇದ್ದುದರಿಂದ ಅವರಿಗೆ ಸಹಾಯ ಮಾಡುತ್ತಿರಲಿಲ್ಲ. ಉಗ್ರಪ್ಪನವರು ಎಷ್ಟು ವ್ಯಾಸಾಂಗ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಹಾಗೂ ಉಗ್ರಪ್ಪನವರ ನಡುವೆ ಸಂಬಂಧ ಅವತ್ತಿನಿಂದ ಇವತ್ತಿನ ತನಕ ಚೆನ್ನಾಗಿದೆ. ನನ್ನ ಗಂಡ ಕೆ ಸಿ ಎಫ್ ಸಿ ಬ್ಯಾಂಕಿನಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ಗಂಡನಿಗೆ ಕೇಸಿನ ವ್ಯವಹಾರ ಚೆನ್ನಾಗಿ ಗೊತ್ತಿದರಿಂದ ಕುಟುಂಬದ ಆಸ್ತಿಯನ್ನು ಕಬಳಿಸಲು ಆ ವಿಲ್ ನ್ನು ಸೃಷ್ಟಿಸಿದ್ದು ಅಂದರೆ ಸರಿಯಲ್ಲ.

56. ನಾನು ಹಾಜರುಪಡಿಸಿದ ಎಲ್ಲಾ ದಾಖಲಾತಿಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಿಪಿ 25 ಏನು ಎಂದು ನನಗೆ ಗೊತ್ತಿಲ್ಲ. ಅದನ್ನು ನರಸಿಂಹೇಗೌಡರಿಗೆ ಏನೂ ಹಕ್ಕು ಇಲ್ಲ ಎಂದು ಹಾಜರುಪಡಿಸಿರುತ್ತೇನೆ. ಆ ದಾಖಲೆಯಲ್ಲಿ ನರಸಿಂಹೇಗೌಡರ ಹೆಸರು ಇದೆಯಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಬೇರೆ ಯಾರ ಹೆಸರು ಇದೆ ಎಂದು ನನಗೆ ಗೊತ್ತಿಲ್ಲ. ಅದನ್ನು ಓದಿಸಿ ತಿಳಿದುಕೊಳ್ಳದೇ ತಂದು ಹಾಜರುಪಡಿಸಿರುತ್ತೇನೆ. ಅದರಲ್ಲಿ ನಾಗಣ್ಣನವರ ಕುಟುಂಬ ಸೋಲೂರಿಗೆ ಸೇರಿದ್ದು ಅಲ್ಲ ಎಂದು ಇದೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**